ಕರ್ನಾಟಕ ಸರ್ಕಾರ

ಸಂ: ಆಇ 98 ವೆಚ್ಚ 6/2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:26.5.2020

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,

ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು-560001

ಇವರಿಗೆ:

ಆಯುಕ್ತರು,

ಖಜಾನೆ ಆಯುಕ್ತಾಲಯ,

ನೆಲಮಹಡಿ, ಪೋಡಿಯಂ ಬ್ಲಾಕ್,

ಡಾ: ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು

ಮಾನ್ಯರೆ,

ವಿಷಯ: ಜಿಲ್ಲಾ/ತಾಲ್ಲೂಕು ಪಂಚಾಯತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ/ಹೊರಗುತ್ತಿಗೆ ಸಿಬ್ಬಂದಿಯವರ ವೇತನ/ಸಂಭಾವನೆಯನ್ನು ಆಬ್ಜೆಕ್ಟ್ ಹೆಡ್ 090ರಡಿ ಸೆಳೆಯಲು ಮಾನ್ಯ ಮಾಡುವ ಬಗ್ಗೆ

ಉಲ್ಲೇಖ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ, ಬಾಗಲಕೋಟೆ ಕೊಪ್ಪಳರವರುಗಳ ಪತ್ರಗಳು

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2020-21ನೇ ಸಾಲಿನ ಆಯವ್ಯಯ ತಯಾರಿಕೆಯ ವೇಳೆಯಲ್ಲಿ ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳಲ್ಲಿ ದಿನಗೂಲಿ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರುಗಳ ಮತ್ತು ಅವರುಗಳಿಗೆ ಪಾವತಿಸಲಾಗುತ್ತಿರುವ ವೇತನ/ಸಂಭಾವನೆಯ ವಿವರಗಳನ್ನು ಒದಗಿಸುವಂತೆ ಅನೇಕ ಬಾರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ಕೋರಲಾಗಿದ್ದರೂ ವಿವರಗಳನ್ನು ನೀಡದ ಕಾರಣ ಲೆಕ್ಕ ಶೀರ್ಷಿಕೆ 2515-00-101-0-28 ಮತ್ತು 2515-00-102-0-61ರ ಆಬ್ಜೆಕ್ಟ್ ಹೆಡ್ 033 ಮತ್ತು 034ರಡಿ ಅನುದಾನವನ್ನು ಒದಗಿಸಲಾಗಿರುವುದಿಲ್ಲ.

ಸದರಿ ಸಿಬ್ಬಂದಿಯವರುಗಳ ವೇತನ ಮತ್ತು ಸಂಭಾವನೆಯನ್ನು ಪಾವತಿಸಬೇಕಾಗಿರುವುದನ್ನು ಮಾನವೀಯತೆಯ ಆಧಾರದ ಮೇಲೆ ಪರಿಗಣಿಸಿ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಪ್ರಸ್ತಾವಿತ ಲೆಕ್ಕ ಶೀರ್ಷಿಕೆಗಳ ಆಬ್ಜೆಕ್ಟ್ ಹೆಡ್ 090ರಡಿ ಬಿಡುಗಡೆಗೊಳಿಸಿರುವ ಅನುದಾನದಿಂದ ದಿನಗೂಲಿ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ವೇತನ/ಸಂಭಾವನೆ ವೆಚ್ಚವನ್ನು ಭರಿಸಲು ಆದೇಶದಲ್ಲಿ ತಿಳಿಸಲಾಗಿದೆ.

2020-21ನೇ ಸಾಲಿನಲ್ಲಿ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಲ್ಲಿ ದಿನಗೂಲಿ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ವೇತನ/ಸಂಭಾವನೆ ವೆಚ್ಚವನ್ನು 090ರಡಿ ಮಾನ್ಯ ಮಾಡುವಂತೆ ಖಜಾನೆಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

(ಸರ್ಕಾರದ ಕಾರ್ಯದರ್ಶಿಗಳು(ವೆಚ್ಚ)
ಆರ್ಥಿಕ ಇಲಾಖೆರವರಿಂದ ಅನುಮೋದಿತ)

ತಮ್ಮ ನಂಬುಗೆಯ,

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳಿಗೆ : ದಿನಗೂಲಿ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರುಗಳ ಮಾರ್ಚ್ ಮಾಹೆಯ ವೇತನ/ಸಂಭಾವನೆಯನ್ನು ಮಾರ್ಚ್ ಮಾಹೆಯಲ್ಲಿಯೇ ಪಾವತಿಸಬೇಕಾಗಿದ್ದು ಪಾವತಿಸದಿರಲು ಕಾರಣವೇನು? ಹಾಗೂ ಈ ರೀತಿ ವಿಳಂಬಕ್ಕೆ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳೇ ಪೂರ್ಣ ಜವಾಬ್ದಾರರಾಗಿರುತ್ತಾರೆ ಹಾಗೂ ಇದಕ್ಕಾಗಿ 090ರಡಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಿಂದಲೇ ಭರಿಸತಕ್ಕದ್ದು ಇದಕ್ಕಾಗಿ ಹೆಚ್ಚುವರಿ ಅನುದಾನ ಕೋರಿದಲ್ಲಿ ಪರಿಗಣಿಸಲಾಗುವುದಿಲ್ಲ